KARN020005922019

MAHESH B T

Authentication purpose
Digitally signed by MAHESH B T
Location: Ramanagara
Date: 2023.12.05 18:07:53 +0530

# 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ರಾಮನಗರ.

**:ಉಪಸ್ಥಿತರು :**

**ಶ್ರೀ ಮಹೇಶ್ ಬಿ.ಟಿ.** ಬಿ.ಕಾಂ., ಎಲ್.ಎಲ್.ಎಂ.,
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರಾಮನಗರ.**

**ದಿನಾಂಕ: 05 ನೇ ಡಿಸೆಂಬರ್ 2023**

ಅಸಲು ದಾವಾ ಸಂಖ್ಯೆ:**150/2019**

ವಾದಿ/ಯರು : ಶ್ರೀ.ವೈ.ಕಾಂತರಾಜು ಮತ್ತು ಇನ್ನೊಬ್ಬರು

-ವಿರುದ್ಧ-

ಪ್ರತಿವಾದಿ/ಯರು : ಶ್ರೀ.ನಾಗರಾಜು ಮತ್ತು ಇತರರು.

ಮಧ್ಯಂತರ ಅರ್ಜಿ **.6** ರ ಪಕ್ಷಕಾರರು

ಎದುರುದಾರರರು/
ಪ್ರತಿವಾದಿಗಳು : ಶ್ರೀ.ನಾಗರಾಜು ಮತ್ತು ಇತರರು.
-- (ಪ್ರತಿವಾದಿ ಸಂಖ್ಯೆ.1 ರಿಂದ 4)

-ವಿರುದ್ಧ-

ಅರ್ಜಿದಾರು/
ವಾದಿಗಳು : ಶ್ರೀ.ವೈ.ಕಾಂತರಾಜು ಮತ್ತು ಇನ್ನೊಬ್ಬರು
-- (ವಾದಿಗಳು)

***

KARN020005922019



**ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-7 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ಸಹವಾಚಕ ಕಲಂ.151 ರ ಮೇಲೆ ಆದೇಶ**

ಪ್ರತಿವಾದಿಯರು ಸಂಖ್ಯೆ.1 ರಿಂದ 4 ರವರುಗಳು ಪ್ರಸ್ತುತ ಮಧ್ಯಂತರ ಅರ್ಜಿ-6 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ಸಹಕಲಂ 151 ರಡಿಯಲ್ಲಿ ಸಲ್ಲಿಸಿ, ವಾದಿಯು ದಾವೆಯು ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಡದೆ ಇರುವುದರಿಂದ ಮತ್ತು ನ್ಯಾಯಾಲಯದ ಶುಲ್ಕವನ್ನು ಸಹ ಸಾಕಷ್ಟು ಪ್ರಮಾಣದಲ್ಲಿ ಪಾವತಿಸದೇ ಸಲ್ಲಿಸಿರುವುದರಿಂದ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶವು ಈ ಕೆಳಗಿನಂತಿದೆ:

ಅರ್ಜಿದಾರರು/ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ವಾದಿಗಳು ಸಲ್ಲಿಸಿರುವ ಈ ದಾವೆಯು ಕಾನೂನು ದೃಷ್ಠಿಯಲ್ಲಿ ಊರ್ಜಿತವಾಗ ತಕ್ಕದ್ದಲ್ಲ, ಮೇಲ್ನೋಟಕ್ಕೆ ವಜಾಗೊಳ್ಳಲು ತಕ್ಕದ್ದಾಗಿರುತ್ತದೆ. ವಾದಿಗಳು ತಮ್ಮ ವಾದ ಪತ್ರದ ಪ್ಯಾರಾ 2 ರಿಂದ 10 ರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ಈ ಅಂಶಗಳನ್ನು ವಾದಿಯು ಈ ದಾವೆಯನ್ನು ಸಲ್ಲಿಸಲು ಸೃಷ್ಟಿ

ಮಾಡಿಕೊಂಡ ಅಂಶವಾಗಿರುತ್ತದೆ. ಮುಂದುವರೆದು, ಸದರಿ ದಾವಾ ಸ್ವತ್ತು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ದಾಸಪ್ಪನದೊಡ್ಡಿ ಗ್ರಾಮದ ಬಿಡದಿ ಪುರಸಭೆ, ವಾರ್ಡ್ ನಂ. 1 ಕ್ಕೆ ಸೇರಿದ ಸ್ವತ್ತು ಆಗಿರುತ್ತದೆ. ಸದರಿ ಈ ಸ್ವತ್ತು 1 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಇದ್ದು, ಇದರಲ್ಲಿ ಸದರಿ 1 ನೇ ಪ್ರತಿವಾದಿ ಆರ್.ಸಿ.ಸಿ. ಕಟ್ಟಡವನ್ನು ಕಟ್ಟಿಕೊಂಡು ಸ್ವಾಧೀನದಲ್ಲಿದ್ದರು.

3. ಮುಂದುವರೆದು ಪ್ರತಿವಾದಿಗಳು ಹೇಳುವುದೇನೆಂದರೆ, ಅದೇ ರೀತಿ 2 ನೇ ಪ್ರತಿವಾದಿಗೆ ಸೇರಿದ ಆಸ್ತಿ ನಂ. 60/58/7/59/ಬಿ/19 ಸಿ ರ ವಿಸ್ತೀರ್ಣ 41x25 ಅಡಿಗಳುಳ್ಳ ಜಾಗ ಇದಕ್ಕೆ ಲಗತ್ತಾದ ಆರ್.ಸಿ.ಸಿ. ಕಟ್ಟಡ ಮತ್ತು ಶೀಟಿನ ಮನೆಯ ಖಾತಾದಾರರು ಈ ದಾವೆಯ 2 ನೇ ಪ್ರತಿವಾದಿಯಾಗಿರುತ್ತಾರೆ. ಅದೇ ರೀತಿ ಸದರಿ 3 ನೇ ಪ್ರತಿವಾದಿಯ ಗಂಡನಾದ ಮುನಿರಾಜುರವರಿಗೆ ದಿನಾಂಕ: 10/04/2017 ರಲ್ಲಿ ನೋಂದಾಯಿತ ದಾನಪತ್ರದ ಮೂಲಕ ಹಾಗೂ ಈ ಸ್ವತ್ತಿಗೆ 3 ನೇ ಪ್ರತಿವಾದಿಯ ಗಂಡ ಮುನಿರಾಜು ಖಾತೆದಾರರಾಗಿರುತ್ತಾರೆ. ಈ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಹಾಗೂ ಇವರ ಗಂಡ ಸ್ವಾಧೀನದಲ್ಲಿದ್ದರು. ಅದೇ ರೀತಿ ಆಸ್ತಿ ನಂ. 62/59/7/59/ಬಿ/19/ಬಿ/1 ರ ವಿಸ್ತೀರ್ಣ 45x20 ಅಡಿಗಳ ಕಟ್ಟಡದ ಖಾತಾದಾರರು ಹಾಗೂ ಸ್ವಾಧೀನದಾರರು 4 ನೇ ಪ್ರತಿವಾದಿಯಾಗಿದ್ದರು. ಅದೇ ರೀತಿ 5 ನೇ ಪ್ರತಿವಾದಿಯವರ ಹೆಂಡತಿಯಾದ ವನಜಾಕ್ಷಿಯವರು ದಿನಾಂಕ:

01/06/1995 ರಲ್ಲಿ ತಿಮ್ಮಕ್ಕ ಹಾಗೂ ಇವರ ಮಕ್ಕಳುಗಳಿಂದ ನೊಂದಾಯಿತ ಕ್ರಯದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ. ಈ ಸ್ವತ್ತಿನಲ್ಲಿ 5 ನೇ ಪ್ರತಿವಾದಿ, ಇವರ ಹೆಂಡತಿಯಾದ ವನಜಾಕ್ಷಿ ಸ್ವಾಧೀನದಲ್ಲಿದ್ದರು. ನಂತರ ಈ ಕ್ರಯದ ಸ್ವತ್ತಿನಲ್ಲಿ 5 ನೇ ಪ್ರತಿವಾದಿ ಹೆಂಡತಿಯಾದ ವನಜಾಕ್ಷಿಯವರು 24x60 ಅಡಿಗಳ ವಿಸ್ತೀರ್ಣದಲ್ಲಿ ಆರ್.ಸಿ.ಸಿ. ಕಟ್ಟಡವನ್ನು ಸಹ ಕಟ್ಟಿಸಿದ್ದರು. ಈ ಮೇಲೆ ಹೇಳಿರುವ 1 ರಿಂದ 4 ನೇ ಪ್ರತಿವಾದಿಗಳು ಹಾಗೂ 5 ನೇ ಪ್ರತಿವಾದಿಯ ಹೆಂಡತಿಯಾದ ವನಜಾಕ್ಷಿಯವರ ಸ್ವತ್ತುಗಳಾದ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ದಾಸಪ್ಪನದೊಡ್ಡಿ ಗ್ರಾಮದ ಬಿಡದಿ ಪುರಸಭೆ 1 ನೇ ವಾರ್ಡಿಗೆ ಸೇರಿದ ಸ್ವತ್ತುಗಳು ಆಗಿರುತ್ತವೆ.

4. ಮುಂದುವರೆದು ಪ್ರತಿವಾದಿಗಳು ಹೇಳುವುದೆನೆಂದರೆ, ಹೀಗಿರುವಲ್ಲಿ ಸದರಿ 1 ರಿಂದ 5 ನೇ ಪ್ರತಿವಾದಿಗಳಿಗೆ ಸೇರಿರುವ ಸ್ವತ್ತುಗಳನ್ನು ಈ ದಾವೆಯ 6 ನೇ ಪ್ರತಿವಾದಿ ಬೆಂಗಳೂರು-ಮೈಸೂರು ರಸ್ತೆ ಅಗಲೀಕರಣಕ್ಕೆ ಭೂಸ್ವಾಧೀನಪಡಿಸಿಕೊಂಡಿರುತ್ತರೆ. 6 ನೇ ಪ್ರತಿವಾದಿ ಈಗಾಗಲೇ 1 ರಿಂದ 4 ನೇ ಪ್ರತಿವಾದಿಗಳಿಗೆ ಹಾಗೂ 5 ನೇ ಪ್ರತಿವಾದಿ ಹೆಂಡತಿಗೆ ಸದರಿ ಸ್ವತ್ತಿನಲ್ಲಿರುವ ಪ್ರತಿವಾದಿಗಳ ಕಟ್ಟಡಗಳಿಗೆ ಅಂದರೆ ಅವರವರುಗಳ ಕಟ್ಟಡಗಳಿಗೆ ಸಂಬಂಧಿಸಿದಂತೆ ಪರಿಹಾರ ಹಣವನ್ನು ಈಗಾಗಲೇ ಪ್ರತಿವಾದಿಗಳಿಗೆ ನೀಡಿರುತ್ತಾರೆ. ಪ್ರತಿವಾದಿಗಳಿಗೆ ಮೇಲೆ ಹೇಳಿರುವ ಸ್ವತ್ತುಗಳ ಅವರವರುಗಳ

ಜಾಗಕ್ಕೆ ಇನ್ನು 6 ನೇ ಪ್ರತಿವಾದಿ ಪರಿಹಾರ ಹಣವನ್ನು ನೀಡಿರುವುದಿಲ್ಲ. ಪ್ರತಿವಾದಿಗಳ ಜಾಗಕ್ಕೆ ಸಂಬಂಧಿಸಿದ ಪರಿಹಾರದ ಹಣವನ್ನು 6 ನೇ ಪ್ರತಿವಾದಿಯು ಮಿಸ್ ನಂ.170/2019 ರ ಪ್ರಕರಣದಲ್ಲಿ ಠೇವಣಿ ಇಟ್ಟಿರುತ್ತಾರೆ. ಈ ಪ್ರಕರಣದಲ್ಲಿ ಪ್ರತಿವಾದಿಗಳು ಪಕ್ಷಕಾರರುಗಳಾಗಿರುತ್ತಾರೆ ಹಾಗೂ ಈ ದಾವೆಯ ವಾದಿಗಳು ಕೂಡ ಸದರಿ ಕೇಸಿನಲ್ಲಿ ಪಕ್ಷಕಾರರು ಆಗಿರುತ್ತಾರೆ. ಈ ಮಿಸ್ ನಂ.170/2019 ರ ಕೇಸು ಮಾನ್ಯ 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಇರುತ್ತದೆ.

5. ಮುಂದುವರೆದು ಪ್ರತಿವಾದಿಗಳು ಹೇಳುವುದೆನೆಂದರೆ, ಹೀಗಿರುವಲ್ಲಿ ವಾದಿಗಳು ದಾವೆಯಲ್ಲಿ ಹೇಳಿರುವ ಚಕ್ಕುಬಂದಿಗೆ ಒಳಪಟ್ಟ ಸ್ವತ್ತು ಯಾವುದು ಇರುವುದಿಲ್ಲ, ವಾದಿಗಳು ದಾವೆಯಲ್ಲಿ ಸುಳ್ಳು ಚಕ್ಕುಬಂದಿ ಹೇಳಿ ಪ್ರತಿವಾದಿಗಳ ಸ್ವತ್ತುಗಳ ಜಾಗದ ಪರಿಹಾರದ ಹಣ ಕಬಳಿಸಲು ಈ ದಾವೆಯನ್ನು ಹೂಡಿರುತ್ತಾರೆ. ಈಗಾಗಲೇ ವಾದಿಗಳು ದಾವೆಯಲ್ಲಿ ಹೇಳಿರುವ ಸರ್ವೆ ನಂಬರ್ ಜಮೀನು ಇಲ್ಲದ ಕಾರಣ ಈ ಸರ್ವೆ ನಂಬರನ್ನು ಪಹಣಿಯಿಂದ ತೆಗೆದು ಹಾಕಲು ರಾಮನಗರ ಉಪ ವಿಭಾಗಾಧಿಕಾರಿಗಳು ದಿನಾಂಕ:26.04.2019 ರಂದು ತಹಸೀಲ್ದಾರ್‌ರವರಿಗೆ ಅರ್ಜಿ ಮತ್ತು ಜ್ಞಾಪನ ಪತ್ರವನ್ನು ಸಹ ನೀಡಿರುತ್ತಾರೆ. ಪ್ರತಿವಾದಿಗಳ ಸ್ವತ್ತುಗಳಲ್ಲಿ ವಾದಿಗಳಿಗೆ ಯಾವುದೇ ರೀತಿಯ

ಹಕ್ಕು ಇರುವುದಿಲ್ಲ. ಸದರಿ ಈ ದಾವೆಯ 6 ನೇ ಪ್ರತಿವಾದಿಯು ಸದರಿ 1 ರಿಂದ 4 ನೇ ಪ್ರತಿವಾದಿಗಳು ಹಾಗೂ 5 ನೇ ಪ್ರತಿವಾದಿಯ ಹೆಂಡತಿ ವನಜಾಕ್ಷಿಯವರುಗಳಿಂದ ರಸ್ತೆ ಅಗಲೀಕರಣಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಾಗದಲ್ಲಿರುವ ಕಟ್ಟಡವನ್ನು ಕೆಡವಿ, ರಸ್ತೆಯನ್ನು ಸಹ ಮಾಡಿರುತ್ತಾರೆ. ಈಗ ಪ್ರತಿವಾದಿಗಳಿಗೆ ಸಂಬಂಧಿಸಿದ ಸ್ವತ್ತುಗಳಲ್ಲಿ ರಸ್ತೆ ಮಾತ್ರ ಇರುತ್ತದೆ.

6. ಮುಂದುವರೆದು ಪ್ರತಿವಾದಿಗಳು ಹೇಳುವುದೆನೆಂದರೆ, ಸದರಿ ವಾದಿಯು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ಆಜ್ಞಾಧಾರಿಕ ಆದೇಶ ಕೋರಿ ದಾವೆ ಸಲ್ಲಿಸಿದ್ದು, ಈ ದಾವೆಯನ್ನು ಈ ಘನ ನ್ಯಾಯಾಲಯಕ್ಕೆ ತಿಳಿಸಲು ಕಾನೂನಿನಲ್ಲಿ ಯಾವುದೇ ರೀತಿ ಅವಕಾಶ ಇರುವುದಿಲ್ಲ, ಈ ಕಾರಣಕ್ಕಾಗಿ ಸದರಿ ಈ ದಾವೆಯು ಈ ನ್ಯಾಯಾಲಯದ ಅಸಲು ಅಧಿಕಾರ ವ್ಯಾಪ್ತಿಗೆ ಒಳಪಡುವುದಿಲ್ಲ. ಈ ಅರ್ಜಿಯನ್ನು ಪುರಸ್ಕರಿಸಿದರೆ ಸದರಿ ವಾದಿಗಳಿಗೆ ಯಾವುದೇ ರೀತಿಯ ಕಷ್ಟ ನಷ್ಟ ಉಂಟಾಗುವುದಿಲ್ಲ, ಒಂದು ವೇಳೆ ಸದರಿ ಅರ್ಜಿಯನ್ನು ತಿರಸ್ಕರಿಸಿದರೆ ಪ್ರತಿವಾದಿಗಳಾದ ತಮಗೆ ತುಂಬಲಾರದ ಕಷ್ಟ ನಷ್ಟ ಉಂಟಾಗುತ್ತದೆ. ಆದ್ದರಿಂದ ವಾದಿಗಳ ದಾವೆಯನ್ನು ಖರ್ಚು ಸಹಿತ ವಜಾಗೋಳಿಸಬೇಕೆಂದು ಕೋರಿಕೊಂಡಿರುತ್ತಾರೆ.

7. *ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ-6 ನ್ನು ವಿರೋಧಿಸಿ ವಾದಿ ಸಂಖ್ಯೆ.1 ರವರು ತಕರಾರು ಸಲ್ಲಿಸಿದ್ದು*, ತಮ್ಮ ತಕರಾರಿನಲ್ಲಿ, ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಸಲ್ಲಿಸಿರುವ ಮಧ್ಯಕಾಡಿನ ಅರ್ಜಿಯು ವಜಾಗೊಳ್ಳತಕ್ಕದ್ದಾಗಿದ್ದು ಮತ್ತು ಕಾನೂನಿನಿಂದ ನಿರ್ಬಂಧಿಸಲ್ಪಡುತ್ತದೆ ಮತ್ತು ಸದರಿ ಮಧ್ಯಕಾಲಿನ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಕಂಡಿಕೆ 2 ರಿಂದ 9 ರಲ್ಲಿ ತಿಳಿಸಿರುವಂತಹ ವಿಷಯಗಳು ಸುಳ್ಳಿನಿಂದ ಕೂಡಿದ್ದು, ಸತ್ಯಕ್ಕೆ ದೂರವಾದ ಸಂಗತಿಗಳಾಗಿರುತ್ತವೆ. ಅದೇ ರೀತಿ ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಈ ದಾವಾ ಸ್ವತ್ತಿನ ಪೈಕಿ ಕೆಲವು ಸ್ವತ್ತನ್ನು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಡದಿ ಪುರಸಭೆಯಲ್ಲಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ತಿಳಿಸಿರುವುದು ಸುಳ್ಳಿನಿಂದ ಕೂಡಿದ್ದು, ಸತ್ಯಕ್ಕೆ ದೂರವಾದ ವಿಚಾರಗಳಾಗಿದ್ದು, ವಾದಿಗಳ ಗಮನಕ್ಕೆ ತಾರದೇ ಪುರಸಭೆ ಅಧಿಕಾರಿಗಳೊಂದಿಗೆ 1 ರಿಂದ 4 ನೇ ಪ್ರತಿವಾದಿಗಳು ಶಾಮೀಲಾಗಿ ಖೋಟಾ ದಾಖಲೆಗಳ ಆಧಾರದ ಮೇಲೆ ವಾದಿಗಳಿಗೆ ನ್ಯಾಯಬದ್ಧವಾಗಿ ಸೇರಿರುವಂತಹ ದಾವಾ ಸ್ವತ್ತಿನ ಸ್ವಾಧೀನದ ಪರಿಹಾರದ ಹಣವನ್ನು ಪಡೆದುಕೊಳ್ಳುವ ಉದ್ದೇಶದಿಂದ ಮೋಸದಿಂದ ಖಾತೆ ಮಾಡಿಸಿಕೊಂಡಿರುತ್ತಾರೆ. ಇದು ನ್ಯಾಯಬಾಹಿರವಾಗಿರುತ್ತದೆ.

8. ವಾದಿಗಳು ಮುಂದುವರೆದು ಹೇಳುವುದೇನೆಂದರೆ, ದಾವಾ ಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತಾಗಿದ್ದು, ಹಕ್ಕ, ಮಾಲೀಕತ್ವ ಹಾಗೂ ಸ್ವಾಧೀನಾನುಭವವನ್ನು ಹೊಂದಿದ್ದು, ದಾವಾ ಸ್ವತ್ತು ಮೂಲತ: ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಲ್ಲುಗೋಪಹಳ್ಳಿ ಗ್ರಾಮದ ಸರ್ವೆ ನಂಬರ್.2 ಆಗಿದ್ದು, ತದನಂತರದಲ್ಲಿ ಸರ್ವೆ ನಂಬರು:2/5 ಪಿ1 ಆಗಿ ಪೋಡಾಗಿದ್ದು. ಈ ಸ್ವತ್ತನ್ನು ವಾದಿಗಳ ತಾತನವರಾದ ದಾಸಪ್ಪನವರು ದಿನಾಂಕ:20.02.1958 ರಂದು ನೋಂದಾಣಿ ಕ್ರಯಪತ್ರದ ಸಂಖ್ಯೆ.3732/1957-58 ರಂತೆ ಖರೀದಿಗೆ ಪಡೆದುಕೊಂಡಿರುತ್ತಾರೆ. ವಾದಿಗಳ ತಾತ, ಅವರ ಪೌತಿ ಸಬೂಬು ವಾದಿಗಳ ತಂದೆ ಡಿ.ಎಲ್ಲಪ್ಪ ರವರ ಹೆಸರಿನಲ್ಲಿ ಖಾತೆ ಮುಂದುವರೆದಿದ್ದು, ಡಿ.ಎಲ್ಲಪ್ಪನವರ ಪೌತಿ ಸಬೂಬು ಡಿ.ಎಲ್ಲಪ್ಪನವರ ವಾರಸುದಾರರಾದ ವಾದಿಗಳ ಹೆಸರಿಗೆ ಜಂಟೀ ಖಾತೆ ಮುಂದುವರೆದಿರುತ್ತದೆ. ಅದರಂತೆ ವಾದಿಗಳು ತಮ್ಮ ಹೆಸರಿಗೆ ಕಾನೂನುಬದ್ದವಾಗಿ ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡು, ಸ್ವಾಧೀನಾನುಭವದಲ್ಲಿ ಮುಂದುವರೆದಿರುತ್ತಾರೆ.

9. ವಾದಿಗಳು ಮುಂದುವರೆದು ಹೇಳುವುದೇನೆಂದರೆ, ವಾದಿಗಳ ಹಕ್ಕು ಬಾಧ್ಯತೆ ಮತ್ತು ಸ್ವಾಧೀನಾನುಭವದಲ್ಲಿರುವಂತಹ ಸರ್ವೆ ನಂಬರು.2 ರಲ್ಲಿನ ಒಟ್ಟು ಸ್ವತ್ತಿನ ಪೈಕಿ 6716 ಚದರ ಮೀಟರ್‌ವುಳ್ಳ ಸ್ವತ್ತನ್ನು ರಾಷ್ಟ್ರೀಯ

ಹೆದ್ದಾರಿ 275 ಗೆ ಭೂ ಸ್ವಾಧೀನಪಡಿಸಿಕೊಂಡು, ವಾದಿಗಳ ಹೆಸರಿಗೆ ಭೂ ಸ್ವಾಧೀನದ ಬಗ್ಗೆ ತಿಳುವಳಿಕೆ ಬಂದಿದ್ದು, 6ನೇ ಪ್ರತಿವಾದಿಯಾದ ಭೂ ಸ್ವಾಧೀನಾಧಿಕಾರಿಗಳು ಭೂ ಸ್ವಾಧೀನದ ಸ್ವತ್ತಿನ ಪೈಕಿ 2451 ಚದರ ಮೀಟರ್ ವಿಸ್ತೀರ್ಣದ ಸ್ವತ್ತಿಗೆ ವಾದಿಗಳು ಭೂ ಸ್ವಾಧೀನದ ಪರಿಹಾರದ ಮೊತ್ತವನ್ನು ಪಡೆದುಕೊಳ್ಳುವಂತೆ ನೋಟೀಸು ಸಹ ನೀಡಿರುತ್ತಾರೆ. ಆದರೆ ಪ್ರತಿವಾದಿಗಳು ವಾದಿಗಳ ಭೂ ಸ್ವಾಧೀನದ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡದಂತೆ ತಕರಾರು ಸಲ್ಲಿಸಿದ್ದರಿಂದ ಹಾಗೂ ವಾದಿಗಳಿಗೆ ಗೊತ್ತಿಲ್ಲದ ಹಾಗೆ ಯಾವುದೇ ಹಕ್ಕು ಹಿತಾಸಕ್ತಿ ಸ್ವಾಧೀನಾನುಭವ ಇಲ್ಲದಿದರುವಂತಹ ಹಾಗೂ ಯಾವುದೇ ನೈಜ ದಾಖಲೆಗಳನ್ನು ಹೊಂದಿರದಂತಹ 1 ರಿಂದ 4ನೇ ಪ್ರತಿವಾದಿಗಳು ಸೃಷ್ಟಿತ ದಾಖಲೆಗಳೊಂದಿಗೆ ತಮ್ಮ ಹೆಸರಿಗೆ ಬಿಡದಿ ಪುರಸಭೆಯವರಿಂದ ಸುಳ್ಳು ಖಾತೆಯನ್ನು ಮಾಡಿಸಿಕೊಂಡು ಭೂ ಸ್ವಾಧೀನದ ಪರಿಹಾರ ಹಣವನ್ನು ಪಡೆಯಲು ಪ್ರಯತ್ನಿಸುತ್ತಿರುವಾಗ, ಅನ್ಯ ಮಾರ್ಗವಿಲ್ಲದೆ ವಾದಿಗಳು ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳುವ ಸಲುವಾಗಿ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆ ವೇಳೆಯಲ್ಲಿ ಈ ದಾವೆಯ 6ನೇ ಪ್ರತಿವಾದಿಯು ವಾದಿಗಳಿಗೆ ಸೇರಿದ್ದ ಆಸ್ತಿಯನ್ನು ಭೂ ಸ್ವಾಧೀನಪಡಿಸಿಕೊಂಡಿರು 6ನೇ ಪ್ರತಿವಾದಿಯು ವಾದಿಗಳಿಗೆ ಸೇರಿದ್ದ ಆಸ್ತಿಯನ್ನು ಭೂ ಸ್ವಾಧೀನಪಡಿಸಿಕೊಂಡಿರುವ ಪರಿಹಾರದ ಮೊತ್ತವನ್ನು ಘನ 1ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಂಕೀರ್ಣ ಅರ್ಜಿ ಸಂಖ್ಯೆ.170/2019ರ ಪ್ರಕರಣದಲ್ಲಿ

ಠೇವಣಿ ಇಟ್ಟಿದ್ದು, ಅದರಲ್ಲಿ ವಾದಿಗಳು ತಮ್ಮ ಹೇಳಿಕೆಯನ್ನು ಸಲ್ಲಿಸಿದ್ದು, ಈಗ ಹಾಲಿ ಸದರಿ ಸಂಕೀರ್ಣ ಅರ್ಜಿಯು ವಿಚಾರಣೆಯ ಹಂತದಲ್ಲಿ ಇರುತ್ತದೆ. ದಾವಾ ಸ್ವತ್ತು ವಾದಿಗಳ ಸ್ವಾಧೀನಾನುಭವದಲ್ಲಿ ಇದ್ದು, ವಾದಿಗಳು ಭೂ ಸ್ವಾಧೀನದ ಪರಿಹಾರ ಮೊತ್ತವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

10. ವಾದಿಗಳು ಮುಂದುವರೆದು ಹೇಳುವುದೇನೆಂದರೆ, ವಾದಿಗಳಿಂದ ಸ್ವಾಧೀನಪಡಿಸಿಕೊಂಡಿರುವಂತಹ ದಾವಾ ಸ್ವತ್ತು 5,00,000/- ಲಕ್ಷ ರೂಗಳಿಗೆ ಮೇಲ್ಪಟ್ಟಿರುವುದರಿಂದ ಈ ಘನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಈ ದಾವೆಯನ್ನು ಹೂಡಿರುತ್ತಾರೆ ಮತ್ತು ಈ ದಾವಾ ಸ್ವತ್ತು ವ್ಯವಸಾಯದ ಜಮೀನು ಆಗಿರುವುದರಿಂದ. ಈ ದಾವಾ ಸ್ವತ್ತಿಗೆ ವಾದಿಗಳು ಹಕ್ಕುದಾರ ರಾಗಿರುವುದರಿಂದ ನ್ಯಾಯಾಲಯಕ್ಕೆ ಸರಿಯಾದ ನ್ಯಾಯಾಲಯ ಶುಲ್ಕವನ್ನು ಪಾವತಿಸಿರುತ್ತಾರೆ. ಮುಂದುವರೆದು, 1 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಂಕೀರ್ಣ ಅರ್ಜಿ ಸಂಖ್ಯೆ.170/2019 ರ ಪ್ರಕರಣ ಹಾಗೂ ಈ ಅಸಲು ದಾವೆಯಲ್ಲಿ ವಿಚಾರಣೆಯು ಆಗಬೇಕಾಗಿರುವುದರಿಂದ ಎರಡೂ ಪ್ರಕರಣಗಳು ಅಂತಿಮವಾಗಿ ತೀರ್ಮಾನವಾಗ ಬೇಕಾಗಿರುವುದರಿಂದ ವವರೆವಿಗೂ ಆದ್ದರಿಂದ ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

11. ಪ್ರತಿವಾದಿಯರ ಮತ್ತು ವಾದಿಯ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

12. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆ:

**1.** ಪ್ರತಿವಾದಿಯರು ಸಲ್ಲಿಸಿರುವ ಮದ್ಯಂತರ ಅರ್ಜಿ**-6** ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **7** ನಿಯಮ **11 (**ಎ**)** ಮತ್ತು **()** ಸಹಕಲಂ **151** ರ ಅರ್ಜಿಯಲ್ಲಿ ವಾದಿಗಳ ವಾದ ಪತ್ರನ್ನು ತಿರಸ್ಕರಿಸಲು ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ಮೇಲ್ನೋಟಕ್ಕೆ ಸಾಭೀತು ಪಡಿಸಿರುತ್ತಾರೆಯೇ**?**

**2.** ಏನು ಆದೇಶ**?**

13. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

ಅಂಶ **1** ಃ ನಕಾರಾತ್ಮಕ**;**

ಅಂಶ **2** ಃ ಅಂತಿಮ ಆದೇಶದಂತೆ

<u>ಕಾರಣಗಳು</u>

14. <u>ಅಂಶ**-1:**</u>08. ವಾದಿಗಳು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ. ದಾವಾ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿ ನ್ಯಾಯಾಲಯದ ಮುಂದೆ ಹಾಜರಾಗಿ ಪ್ರಸ್ತುತ ಮಧ್ಯಂತರ ಅರ್ಜಿಯನ್ನು

ಸಲ್ಲಿಸಿ, ವಾದಿಯ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈಗಾಗಲೇ ತಿಳಿಸಿರುವಂತೆ, ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿಗೆ ಸಂಬಂದಿಸಿಂದತೆ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುವುದರಿಂದ ವ್ಯಾಜ್ಯ ಕಾರಣ ಉದ್ಭವವಾದ ನಂತರ ವಾದಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ವ್ಯಾಜ್ಯ ಕಾರಣ ಉದ್ಭವವಾಗಿರುವ ಬಗ್ಗೆ ತಮ್ಮ ದಾವೆಯಲ್ಲಿ ತಿಳಿಸಿರುತ್ತಾರೆ ಮತ್ತು ಯಾವುದೇ ಕಾನೂನು ಮೂಲಕ ಪ್ರತಿಬಂದಿತವಾಗಿಲ್ಲ. ಪ್ರತಿವಾದಿಯರು ವಾದಿಯ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಉಂಟು ಮಾಡಿದ ನಂತರ ದಾವೆ ಸಲ್ಲಿಸಿರುತ್ತಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದರೆ ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಪ್ರಸ್ತುತ ಅರ್ಜಿಯನ್ನು ನಿಯಮ 11 (ಎ) ಮತ್ತು () ರಡಿಯಲ್ಲಿ ಸಲ್ಲಿಸಿ ವಾಜ್ಯ ಕಾರಣ ಇರುವುದಿಲ್ಲ ಆದ್ದರಿಂದ ವಾದಿಯ ವಾದ ಪತ್ರವನ್ನು ತಿರಸ್ಕರಸಬೇಕೆಂದು ಕೋರಿಕೊಂಡಿರುತ್ತಾರೆ. ಆದರೆ ವಾದಿಯ ವಾದ ಪತ್ರವನ್ನು ಗಮನಿಸಿದಾಗ ಪ್ರತಿವಾದಿಯರು ದಾವಾ ಸ್ವತ್ತಿಗೆ ಹಸ್ತಕ್ಷ್ಷೇಪ ಉಂಟು ಮಾಡಿದ ನಂತರ ವ್ಯಾಜ್ಯ ಕಾರಣ ಉದ್ಭವವಾಗಿ ದಾವೆ ಸಲ್ಲಿಸಿರುವುದು ಕಂಡುಬಂದಿರುತ್ತದೆ.

15. ಕಾನೂನು ಸ್ಪಷ್ಟವಾಗಿ ತಿಳಿಸಿರುವಂತೆ, ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ರಲ್ಲಿ ತಿಳಿಸಿರುವಂತೆ, ವಾದ ಪತ್ರವನ್ನು

ತಿರಸ್ಕರಿಸುವಾಗ, ವಾದಪತ್ರದ ಅಂಶಗಳನ್ನು ಮಾತ್ರ ಪರಿಗಣಿಸಬೇಕೆ ಹೊರೆತು ಪ್ರತಿವಾದ ಪತ್ರದ ಅಂಶಗಳನ್ನು ಪರಿಗಣಿಸಬಾರದು ಎಂದು ತಿಳಿಸಿರುತ್ತದೆ. ಅಲ್ಲದೇ ***ILR 2016 KAR 2429 between Smt. N. Triveni V/s Sri. G.T. Shankr*** ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ಅರ್ಜಿಯನ್ನು ಪುರಸ್ಕರಿಸುವಾಗ ವಾದ ಪತ್ರದಲ್ಲಿ ಇರುವ ಅಂಶಗಳನ್ನು ಮಾತ್ರ ಪರಿಗಣಿಸಬೇಕು, ಪ್ರತಿವಾದ ಪತ್ರವನ್ನು ಪರಿಗಣಿಸಬಾರದು ಎಂದು ತಿಳಿಸಿರುತ್ತದೆ. ಅಲ್ಲದೇ *ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯು**,** ಮಾದಪ್ಪ ಯಾನೆ ಶಿವಲಿಂಗಪ್ಪ ವಿರುದ್ದ ಮಡಿವಾಳಪ್ಪ* ಪ್ರಕರಣದಲ್ಲಿ ವಾದ ಪತ್ರವನ್ನು ತಿರಸ್ಕರಿಸಲು ವಾದ ಪತ್ರದಲ್ಲಿರುವ ಅಂಶಗಳನ್ನು ಮಾತ್ರ ಪರಿಗಣಿಸಬೇಕು. ಪ್ರತಿವಾದ ಪತ್ರದ ಅಂಶಗಳ ಆಧಾರದ ಮೇಲೆ ವಾದ ಪತ್ರವನ್ನು ತಿರಸ್ಕರಿಸಬಾರದು ಎಂದು ಸ್ಪಷ್ಟವಾಗಿ ತಿಳಿಸಿರುತ್ತದೆ.

16. ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **7** ನಿಯಮ **11** ರಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ**.**

*ಎ. ವ್ಯಾಜ್ಯ ಕಾರಣವನ್ನು ತಿಳಿಸದಿರುವಲ್ಲಿ.*

*ಬಿ. ಕೇಳಲಾದ ಪರಿಹಾರದ ಮೌಲ್ಯವನ್ನು ಕಡಿಮೆಯಾಗಿ ನಮೂದಿಸಿರುವಲ್ಲಿ ಮತ್ತು ತಾನು ಗೊತ್ತು ಪಡಿಸಿದ ಕಾಲದೊಳಗೆ ಆ ಮೌಲ್ಯ ನಿಗದಿಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವು*

*ವಾದಿಯನ್ನು ಅಗತ್ಯ ಪಡಿಸಿದ್ದು, ಅವನು ಆಗೇ ಮಾಡಲು ತಪ್ಪಿದ್ಲಲ್ಲಿ.*

*ಸಿ. ಕೇಳಲಾದ ಪರಿಹಾರದ ಮೌಲ್ಯವನ್ನು ಸರಿಯಾಗಿ ನಮೂದಿಸಿದ್ದರೂ ಸಾಕಷ್ಟ ಸ್ಟ್ಯಾಂಪ್ ಗಳು ಇಲ್ಲದ ಕಾಗದದ ಮೇಲೆ ವಾದ ಪತ್ರ ಬರೆದಿರುವಲ್ಲಿ, ಮತ್ತು ನ್ಯಾಯಾಲಯವು ತಾನು ಗೊತ್ತು ಪಡಿಸುವ ಕಾಲದೊಳಗೆ ಅಗತ್ಯವಾದ ಸ್ಟ್ಯಾಂಪ್ ಕಾಗದವನ್ನು ವಾದಿಯು ಒದಗಿಸಬೇಕೆಂದು ಅವನನ್ನು ಅಗತ್ಯ ಪಡಿಸಿದ್ದು, ಅವನು ಹಾಗೇ ಮಾಡಲು ತಪ್ಪಿದಲ್ಲಿ.*

*ಡಿ. ವಾದ ಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನು ಮೂಲಕ ಪ್ರತಿಬಂದಿತವಾಗಿದೆ ಎಂದು ಕಂಡುಬಂದಲ್ಲಿ .*

*ಇ. ವಾದ ಪತ್ರವನ್ನು ದ್ವಿ ಪ್ರತಿಯಲ್ಲಿ ಹಾಜರುಪಡಿಸದ ಸಂದರ್ಭದಲ್ಲಿ ವಾದ ಪತ್ರವನ್ನು ತಿರಸ್ಕರಿಸಬಹುದೆಂದು ತಿಳಿಸಿರುತ್ತದೆ.*

17. ಈಗಾಗಲೇ ತಿಳಿಸಿರುವಂತೆ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ಅಡಿಯಲ್ಲಿ ಅರ್ಜಿ ಸಲ್ಲಿಸಿದಾಗ ವಾದಿಯ ವಾದ ಪತ್ರದಲ್ಲಿರುವ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕೇ ಹೊರೆತು ಪ್ರತಿವಾದಿಯ ಪ್ರತಿಪಾದನೆಯನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಕಾನೂನು ಸ್ಪಷ್ಟವಾಗಿ ತಿಳಿಸಿರುವಂತೆ ವ್ಯಾಜ್ಯ ಕಾರಣ ಎಂಬುವುದು ವಿಷಯಗಳ ಸಮುೂಚ್ಚಲಾಯ (bundle of facts) ಆಗಿರುತ್ತದೆ. ಪ್ರಸುತ್ತ ದಾವೆಯಲ್ಲಿ ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಮದ್ಯಂತರ ಅರ್ಜಿಯಲ್ಲಿ ವಾದಿಗಳ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಇರುವುದಿಲ್ಲ ಎಂಬ ಪ್ರತಿಪಾದನೆಯನ್ನು ತೆಗೆದುಕೊಂಡಿರುತ್ತದೆ. ಮಾನ್ಯ ಸರ್ವೋಚ್ಚ

ನ್ಯಾಯಾಲಯವು ***(2003) 1 SCC 557 between Saleem bhai V/s State of Maharastra*** ಪ್ರಕರಣದಲ್ಲಿ ಅವಶ್ಯಕ ಅಂಶಗಳನ್ನು ಮಾತ್ರ ಅರ್ಜಿ ವಿಲೇವಾರಿ ಮಾಡುವಾಗ ಪರಿಗಣಿಸಬೇಕೆಂದು ಸ್ಪಷ್ಟವಾಗಿ ತಿಳಿಸಿರುತ್ತದೆ.

18. ದಿವಾನಿ ಪಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ಮೇಲೆ ಆದೇಶ ಮಾಡುವಾಗ ವಾದಪತ್ರದ ಅಂಶಗಳನ್ನು ಮಾತ್ರ ಪರಿಗಣಿಸಬೇಕೇ ಹೊರೆತು ಪ್ರತಿವಾದಪತ್ರದ ಅಂಶಗಳನ್ನು ಪರಿಗಣಿಸಬಾರದು ಎಂದು ಸ್ಪಷ್ಟವಾಗಿ ತಿಳಿಸಿರುತ್ತದೆ. ಈಗಾಗಲೇ ತಿಳಿಸಿರುವಂತೆ ವಾದಿಯು ಪ್ರಸ್ತುತ ದಾವೆಯನ್ನು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ***(2017) 5 SCC 345 between KULDEEP SINGH PATHANIA V/s BIKRAM SINGH JARYAL*** ಪ್ರಕರಣದಲ್ಲಿ ನ್ಯಾಯಾಲಯವು ಸಂಪೂರ್ಣ ವಾದ ಪತ್ರವನ್ನು ಗಮನಿಸಬೇಕು ನಂತರದಲ್ಲಿ ವ್ಯಾಜ್ಯ ಕಾರಣ ಉದ್ಭವವಾಗಿದೆಯೇ ಅಥವಾ ಇಲ್ಲವೋ ಎಂಬುವುದನ್ನು ಪರಿಗಣಿಸಿ ನಂತರ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ತಿಳಿಸಿರುತ್ತದೆ.

19. ಪ್ರಸ್ತುತ ದಾವೆಯಲ್ಲಿ ವಾದಿಗಳು ವಾದ ಪತ್ರವನ್ನು ಗಮನಿಸಿದಾಗ, ವಾದಿಗಳು ಪ್ರತಿವಾದಿಗಳ ವಿರುದ್ಧ ದಾವೆ ಹೂಡಲು ವ್ಯಾಜ್ಯ ಕಾರಣ ಉದ್ಭವವಾಗಿರುವ ಬಗ್ಗೆ ಪ್ರತಿವಾದಿಯು ವಾದಿಯ ಸ್ವತ್ತಿಗೆ ಹಸ್ತಕ್ಷೇಪ ಉಂಟು ಮಾಡಿದ ನಂತರ ಪ್ರಸ್ತುತ ದಾವೆಯನ್ನು ಸಲ್ಲಿಸಿದ ಬಗ್ಗೆ ಸ್ಪಷ್ಟವಾಗಿ

ತಿಳಿಸಿರುವುದು ಕಂಡುಬಂದಿರುತ್ತದೆ. ವ್ಯಾಜ್ಯ ಕಾರಣಕ್ಕೆ ಸಂಬಂಧಿಸಿದ ಅಂಶವನ್ನು ನ್ಯಾಯಾಲಯವು ಪರಿಗಣಿಸಬೇಕಾದರೆ ಸಂಪೂರ್ಣ ವಾದ ಪತ್ರವನ್ನು ನೋಡಬೇಕೆಂದು ಮೇಲ್ಮನವಿ ನ್ಯಾಯಾಲಯಗಳು ಹಲವಾರು ಪ್ರಕರಣಗಳಲ್ಲಿ ತಿಳಿಸಿರುತ್ತದೆ.

20. ದಿವಾನಿ ಪಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ಅರ್ಜಿಯನ್ನು ಪರಿಗಣಿಸುವಾಗ ಪ್ರತಿವಾದ ಪತ್ರದಲ್ಲಿರುವ ಪ್ರತಿಪಾದನೆಯನ್ನು ಪರಿಗಣಿಸಬಾರದು ಎಂದು ಸ್ಪಷ್ಟವಾಗಿ ಈಗಾಗಲೇ ತಿಳಿಸಲಾಗಿದೆ. ಪ್ರತಿವಾದಿಗಳು ವಾದಿಗಳ ಸ್ವತ್ತಿಗೆ ಹಸ್ತಕ್ಷೇಪ ಉಂಟು ಮಾಡಿದಾಗ ಪ್ರಸ್ತುತ ದಾವೆಯನ್ನು ವಾದಿಗಳು ಪ್ರತಿವಾದಿಯರ ವಿರುದ್ದ ಸಲ್ಲಿಸಿರುವುದು ಕಂಡುಬಂದಿರುತ್ತದೆ. ವ್ಯಾಜ್ಯ ಕಾರಣ ಎನ್ನುವುದು ವಿಷಯಗಳ ಸಮುಚ್ಚಲಾಯ ಆಗಿರುತ್ತದೆ. ದಾವೆ ಹೊಡಲು ವ್ಯಾಜ್ಯ ಕಾರಣ ಉದ್ಭವವಾದ ನಂತರ ವಾದಿಗಳು ಪ್ರತಿವಾದಿಯರ ವಿರುದ್ದ ದಾವೆಯು ಹೂಡಿರುವುದು ವಾದ ಪತ್ರದಲ್ಲಿ ಸ್ಪಷ್ಟವಾಗಿ ತಿಳಿದು ಬಂದಿರುತ್ತದೆ ಹಾಗೂ ಸರಿಯಾದ ನ್ಯಾಯಾಲಯ ಶುಲ್ಕವನ್ನು ಪಾವತಿ ಮಾಡಿ ದಾವೆ ಸಲ್ಲಿಸಿರುತ್ತಾರೆ.

21. ಈಗಾಗಲೇ ತಿಳಿಸಿರುವಂತೆ ವಾದಿಯ ಪ್ರಸ್ತುತ ದಾವೆಯನ್ನು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ. ವ್ಯಾಜ್ಯ ಕಾರಣ ಉದ್ಭವವಾದ ನಂತರ ವಾದಿಯು

ಪ್ರಸ್ತುತ ದಾವೆಯನ್ನು ಸಲ್ಲಿಸಿರುವುದು ಕಂಡುಬಂದಿರುತ್ತದೆ. ಪ್ರತಿವಾದಿ ಸಂಖ್ಯೆ.1 ರಿಂ 4 ರವರುಗಳು ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಈ ಹಂತದಲ್ಲಿ ಪರಿಗಣಿಸಲು ಸಾದ್ಯವಿರುವುದಿಲ್ಲ ಅದಕ್ಕೆ ಸಾಕ್ಷಿ ವಿಚಾರಣೆ ಅಗತ್ಯ ಇರುತ್ತದೆ. ಆದ್ದರಿಂದ ಅಂಶ**-1** ನಕರಾತ್ಮಕ ಎಂದು ಉತ್ತರಿಸಲಾಗಿದೆ**.**

22. <u>ಅಂಶ**-2**</u> ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನ್ಯಾಯಾಲಯ ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

# <u>ಆದೇಶ</u>

ಪ್ರತಿವಾದಿ ಸಂಖ್ಯೆ.1 ರಿಂದ 4 ರವರುಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ-6 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 (ಎ) ಮತ್ತು (ಡಿ) ಸಹ ಕಲಂ 151 ನ್ನು ಖರ್ಚು ಸಹಿತ ತಿರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಭಾಗಶಃ ಉಕ್ತಲೇಖನ ನೀಡಿ, ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 05 ನೇ ಡಿಸೆಂಬರ್ 2023 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ).

**(ಮಹೇಶ್ ಬಿ.ಟಿ.)**
**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ರಾಮನಗರ.**